# ಪುರಂದರ ದಾಸರ ಕೀರ್ತನೆಗಳಲ್ಲಿ ಲೋಕ ನೀತಿಯ ಅಂಶಗಳು

ಉಮಾ ಮಹೇಶ್ವರಿ ಎಂ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ವಿ.ಆರ್. ಪ್ರಥಮ ದರ್ಜೆ ಕಾಲೇಜು, ಎಚ್ಎಸ್ಆರ್ ಬಡಾವಣೆ, ಬೆಂಗಳೂರು.

DOI: https://doi.org/10.5281/zenodo.15795901

## ABSTRACT:

"ಪುರಂದರದಾಸರು ಕರ್ನಾಟಕ ಸಂಗೀತ ಪಿತಾಮಹರೆಂದು ಪ್ರಸಿದ್ಧರಾದವರು." ಪುರಂದರದಾಸರು 1480 ರಲ್ಲಿ ಜನಿಸಿದರು ಮತ್ತು 1564, ಜನವರಿ ಎರಡರಂದು ನಿಧನರಾದರು. ವರದಪ್ಪ ನಾಯಕ ಮತ್ತು ತಾಯಿ ರುಕ್ಮಿಣಿಯವರು ಪುರಂದರದಾಸರ ತಂದೆ ತಾಯಿಗಳು. ಪುರಂದರದಾಸರ ತಂದೆ ಚಿನ್ನ, ಬೆಳ್ಳಿ ಮತ್ತು ರತ್ನಭರಣಗಳ ವ್ಯಾಪಾರ ಮಾಡುತ್ತಿದ್ದರು ಎಂದು ತಿಳಿದುಬರುತ್ತದೆ. ಪುರಂದರದಾಸರ ಮೊದಲ ಹೆಸರು ಶ್ರೀನಿವಾಸ ನಾಯಕರು ಎಂಬುದಾಗಿತ್ತು. ಶಿಕ್ಷಣದ ಮೂಲಕ ಸಂಗೀತದಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ಗಳಿಸಿದರು. ಶ್ರೀನಿವಾಸ ನಾಯಕರು ತಮ್ಮ 16ನೇ ವಯಸ್ಸಿನಲ್ಲಿ ಸರಸ್ವತಿ ಬಾಯಿ ಎಂಬ ಕನ್ಯೆಯೊಂದಿಗೆ ವಿವಾಹವಾದರು. ನಂತರ ಶ್ರೀನಿವಾಸ ನಾಯಕರು ರತ್ನಪಡಿ ವ್ಯಾಪಾರ ಮಾಡುತ್ತಿದ್ದರು. ಕೆಲವು ವರ್ಷಗಳ ನಂತರ ಅವರ ಬದುಕಿನಲ್ಲಿ ನಡೆದ ಒಂದು ಮೂಗುತಿಯ ಘಟನೆಯ ಕಾರಣದಿಂದಾಗಿ ಶ್ರೀಮಂತಿಕೆಯಲ್ಲಿ ಜಿಗುಪ್ಸೆ ಹೊಂದಿ ತಮ್ಮ ಬಳಿಯಲ್ಲಿದ್ದ ಎಲ್ಲ ಸಂಪತ್ತನ್ನು, ತಮ್ಮ 30ನೇ ವಯಸ್ಸಿನಲ್ಲಿ ದಾನ ಮಾಡಿ, ತಮ್ಮ ಕುಟುಂಬದೊಂದಿಗೆ ಭಿಕ್ಷುಕ ಜೀವನ ನಡೆಸಲು ಮುಂದಾದರು. ಅದರೊಂದಿಗೆ ಕೀರ್ತನೆಗಳನ್ನು ಹಾಡಲು ಪ್ರಾರಂಭಿಸಿದರು.

## KEYWORDS:

ಎಚ್ಚರಿಕೆ, ಅಧಿಕಾರ ದರ್ಪ, ಕೀರ್ತಿ, ದುರ್ಜನರು, ಪರಸ್ತ್ರೀ, ಶಾಶ್ವತವಲ್ಲ, ಅಪಕೀರ್ತಿ, ದುಷ್ಕೃತ್ಯ.

ಪುರಂದರದಾಸರು ದಾಸಶ್ರೇಷ್ಠರೆನ್ನಿಸಿದವರು. ಶ್ರೀಮಂತಿಕೆಯ ಜೀವನವನ್ನು ನಡೆಸಿದ ಇವರು ತದನಂತರ ಆಧ್ಯಾತ್ಮದೆಡೆಗೆ ವಾಲಿ ಪುರಂದರವಿಠಲನನ್ನು ಭಕ್ತಿಯಿಂದ ಆರಾಧಿಸುವ ಕಾಯಕದಲ್ಲಿ ನಿರತರಾಗುತ್ತಾರೆ. ಒಂದೊಮ್ಮೆ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಯಾದ ಕೃಷ್ಣದೇವರಾಯನ ಗುರುಗಳಾಗಿದ್ದ ಶ್ರೀ ವ್ಯಾಸತೀರ್ಥರನ್ನು ಪುರಂದರದಾಸರು ಭೇಟಿಯಾದರು. ನಂತರ 1525 ರಲ್ಲಿ, ಗುರುಗಳಾದ ವ್ಯಾಸತೀರ್ಥರಿಂದ ಔಪಚಾರಿಕವಾಗಿ ದೀಕ್ಷೆಯನ್ನು ಪಡೆದರು. ಆನಂತರ ಪುರಂದರದಾಸ ಎಂಬ ಹೆಸರು ಬಂತು. ಪುರಂದರದಾಸರು ವಿಜಯನಗರ ಸಾಮ್ರಾಜ್ಯ, ಪಂಡರಾಪುರ ಮುಂತಾದ ಕಡೆಗಳಲ್ಲಿ ಸಂಚರಿಸಿ ದೇವರ ದರ್ಶನ

ಮಾಡಿ ಹೃದಯಸ್ಪರ್ಶಿಯಾದ ಕೀರ್ತನೆಗಳನ್ನು ರಚಿಸಿದರು ಹಾಗೂ ಹಾಡತೊಡಗಿದರು. ತಮ್ಮ ಕೀರ್ತನೆಗಳ ಮೂಲಕ ಸಮಾಜಕ್ಕೆ ಹೆಚ್ಚಿನ ಸಂದೇಶಗಳನ್ನು ನೀಡಲು ಮುಂದಾದರು. ಅಂತಹ ಸಂದೇಶಗಳಲ್ಲಿ ಪುರಂದರದಾಸರು ಸಮಾಜಕ್ಕೆ ನೀಡುವ ಎಚ್ಚರಿಕೆ ಮಾತುಗಳನ್ನು ನಾವು ನೋಡಬಹುದಾಗಿದೆ.

"ಹೆಚ್ಚಿದೆ ಹಿಗ್ಗದೆ ಇದ್ದರೆ ಲೋಕಕ್ಕೆ ಮೆಚ್ಚು" ಎಂಬ ಈ ಸಾಲು ಇಂದಿನ ಆಧುನಿಕ ಜಗತ್ತಿನಲ್ಲಿ ಮನುಷ್ಯನ ಅಧಿಕಾರದ ಮದದ ಬಗ್ಗೆ ಹೇಳಿದಂತಿದೆ. ಏಕೆಂದರೆ ಅಧಿಕಾರ ಬಂದಾಗ, ಐಶ್ವರ್ಯ ಬಂದಾಗ, ದುರಹಂಕಾರದಿಂದ ವರ್ತಿಸುವ ಜನರೇ ಇಂದು ಹೆಚ್ಚು. ಆದರೆ ಅದರಿಂದ ಅವರಿಗೆ ತೊಂದರೆಗಳಾಗುತ್ತವೆ. ನಂತರ ಅಧಿಕಾರ ಕಳೆದುಕೊಂಡಾಗ ಅವರ ದುರಹಂಕಾರದ ವರ್ತನೆಯಿಂದ ನೊಂದ ಜನ ಅವರಿಗೆ ಪ್ರತೀಕಾರದ ಪಾಠ ಕಲಿಸುತ್ತಾರೆ. ಮಾನವ ಜನ್ಮ ಶಾಶ್ವತವಲ್ಲ, ಅದರಿಂದ ಬದುಕಿರುವಷ್ಟು ಕಾಲ ಒಳಿತನ್ನೇ ಮಾಡಿದರೆ ನಮಗೂ ಸಮಾಜಕ್ಕೂ ಒಳ್ಳೆಯದಾಗುತ್ತದೆ ಎಂಬುದು ಇಂದು ಸ್ಪಷ್ಟವಾಗಿ ಕಂಡುಬರುತ್ತಿದೆ.

**"ದೊರೆ ಎನ್ನ ಬಲವು ಸುಸ್ಥಿರವೆಂದೆಲ್ಲರ ಹಗೆ ತರವಲ್ಲ ಎಚ್ಚರಿಕೆ**
**ಉರುಗನ ಮುತ್ತಿ ಕಟ್ಟಿರುವ ಕೊರೆವಂಥ ತೆರನಪ್ಪುದೆಚ್ಚರಿಕೆ"**

ಎನ್ನುವ ಸಾಲುಗಳು ಇಂದಿನ ಆಧುನಿಕ ಪ್ರಪಂಚದ ಅಧಿಕಾರದ ಮದ ಹಾಗೂ ಅದರಿಂದ ಅನುಭವಿಸಬೇಕಾದ ತೊಂದರೆಯನ್ನು ಬಿಂಬಿಸುವಂತಿವೆ. ಆಧುನಿಕ ಕಾಲದಲ್ಲಿ ಮಂತ್ರಿಯಾದ ವ್ಯಕ್ತಿಗೆ ಅಧಿಕಾರವಿದೆ ಎಂದು, ನನಗೆ ಎಲ್ಲರ ಬೆಂಬಲವಿದೆ ಎಂದು ಜನಪ್ರತಿನಿಧಿ ಆದವನು ತನಗೆ ದೊರೆತಿರುವ ಅಧಿಕಾರವನ್ನು ಬಳಸಿಕೊಂಡು ಜನಸಾಮಾನ್ಯರಿಗೆ ತೊಂದರೆ ನೀಡಿ ತನ್ನ ಸ್ವಾರ್ಥ ಸಾಧಿಸಿಕೊಂಡರೆ, ಮುಂದೆ ಒಂದು ದಿನ ಅಧಿಕಾರಾವಧಿ ಮುಗಿದ ಮೇಲೆ ಸಾಮಾನ್ಯ ಜನರೆಲ್ಲ ಸೇರಿ ಅವನನ್ನು ಅಧಿಕಾರದಿಂದ ಕೆಳಗಿಳಿಸುತ್ತಾರೆ ಎಂಬುದು ಕಾಳೋರಗವ ಕಟ್ಟಿರುವೆಗಳು ಮುತ್ತಿ ಕೊರೆದಂತೆ ಎಂಬ ಸಾಲಿನಲ್ಲಿ ಪ್ರತಿಬಿಂಬಿತವಾಗುತ್ತದೆ. ಇಂದಿನ ಆಧುನಿಕ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಉದಾಹರಣೆಗೆ, ಹಲವು ಜನರನ್ನು ಅಧಿಕಾರ ಬಲದಿಂದ ವಂಚಿಸಿದ ರಾಜಕಾರಣಿಗಳು ಅಧಿಕಾರಗಳು ವಂಚಿತರಾದ ಜನರ ಕಾರಣದಿಂದಲೇ ಜೈಲು ಶಿಕ್ಷೆ ಅನುಭವಿಸಬೇಕಾಗಿ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ.

**"ಪರಸತಿ ಪರಧನ ಅಪಹರಿಸಲು ಸಿರಿಮೊಗದಿರುಹುವಳೆಚ್ಚರಿಕೆ**
**ನೆರೆ ಛಿದ್ರ ಕುಂಭದ ನೀರಿನಂತಾಯುಷ್ಯ ಸರಿಯುತಿದೆಚ್ಚರಿಕೆ"**

ಎಂಬ ಸಾಲುಗಳು ಆಧುನಿಕ ಸಮಾಜದಲ್ಲಿ ನಾವು ನೋಡುತ್ತಿರುವಂತೆ, ಬೇರೆಯವರ ಮನೆ ಹೆಣ್ಣು ಮಕ್ಕಳನ್ನು ಅಪಹರಿಸುವುದು, ಸ್ವಾರ್ಥಕ್ಕೆ ಬಳಸಿಕೊಳ್ಳುವುದು ಸರ್ವೆ ಸಾಮಾನ್ಯವಾಗಿವೆ. ಇಂದು ಸಮಾಜದಲ್ಲಿ ಕಂಡುಬರುತ್ತಿರುವ ಮಹಿಳೆಯರ

ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ಅಪಹರಣ ಪ್ರಕರಣಗಳು, ಅತ್ಯಾಚಾರಗಳು ಮುಂತಾದವನ್ನು ಕುರಿತು ಎಚ್ಚರಿಸಿದಂತಿದೆ. ಮೇಲಿನ ಸಾಲಿನಲ್ಲಿ ಹೇಳಿರುವಂತೆ ಪರಸತಿ ಅಂದರೆ ಬೇರೆಯವರ ಹೆಂಡತಿ, ಬೇರೆಯವರ ಮನೆಯ ಹೆಣ್ಣು ಮಕ್ಕಳು ಮುಂತಾದವರ ಮೇಲೆ ಕೆಟ್ಟ ದೃಷ್ಟಿಯನ್ನು ಹರಿಸಿದರೆ, ಎಲ್ಲವನ್ನು ಕಳೆದುಕೊಂಡು ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸುವುದನ್ನು ಇಂದಿನ ಸಮಾಜ ಅರಿತುಕೊಳ್ಳಬೇಕಾಗಿದೆ. ಏಕೆಂದರೆ ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಹೇಳಿರುವ ಲೋಕನೀತಿಯ ಎಚ್ಚರಿಕೆಯ ಮಾತುಗಳು ಸರ್ವಕಾಲಕ್ಕೂ ಸತ್ಯವಾಗಿದೆ. ಮಹಿಳೆಯರನ್ನು ಅಪಹರಿಸಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಎಷ್ಟೋ ಜನ ಇಂದು ತಮ್ಮೆಲ್ಲ ಅಧಿಕಾರ, ಹಣ, ಸಂಪತ್ತು ಎಲ್ಲವನ್ನು ಕಳೆದುಕೊಂಡು ಜೈಲುವಾಸ ಅನುಭವಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗೆ ಪುರಂದರದಾಸರ ಹಲವು ಕೀರ್ತನೆಗಳಲ್ಲಿ ಕಂಡುಬರುವ ಆಧುನಿಕ ವಿಷಯಗಳ ಬಗ್ಗೆ ಲೇಖನದಲ್ಲಿ ಸೂಕ್ಷ್ಮವಾಗಿ ವಿವರಿಸಲಾಗಿದೆ.

**"ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಗುಣವ ಬಿಡು ನಾಲಿಗೆ**
**ವಿಚಾರವಿಲ್ಲದೆ ಪರರ ದೂಷಿಸುವುದಕ್ಕೆ ಚಾಚಿಕೊಂಡಿರುವಂತ ನಾಲಿಗೆ**
**ಇದ್ದದ್ದ ಮಾತನಾಡು ನಾಲಿಗೆ ಹಿಡಿದಾಳಿದು ಹುಸಿ ಬೇಡ ನಾಲಿಗೆ**
**ಇದು ಕಂಡು ಉಣ್ಣುವ ಮೃತಗಳನ್ನು ಬುದ್ಧಿಯಲ್ಲಿಹುದು ಕಂಡೆಯ ನಾಲಿಗೆ"**

ಎಂಬ ಸಾಲುಗಳಲ್ಲಿ ಪುರಂದರದಾಸರು ಇಂದಿನ ಸಮಾಜದಲ್ಲಿ ಮನುಷ್ಯ ಏನೆಲ್ಲ ಮಾತುಗಳನ್ನು ಆಡುತ್ತಾ, ತನಗೆ ಬೇಕಾದಂತೆ ಉಪಕಾರ ಮಾಡಿಸಿಕೊಂಡು ತನ್ನ ಸ್ವಾರ್ಥ ಸಾಧನೆಯಾದ ಮೇಲೆ ಸಹಾಯ ಮಾಡಿದವರನ್ನು ಮರೆತು ಹೇಗೆ ಅವರ ಮೇಲೆ ಇಲ್ಲಸಲ್ಲದ ನೆಪ ಮಾಡಿಕೊಂಡು ಅವರನ್ನು ದೂಷಿಸುತ್ತಾ ಬದುಕುತ್ತಾರೋ ಅಂತವರಿಗೆ ಎಚ್ಚರಿಸುವ ರೀತಿಯಲ್ಲಿ ಈ ಮೇಲಿನ ಸಾಲುಗಳಲ್ಲಿ ನೀತಿ ಪಾಠವನ್ನು ಹೇಳಿ ಎಚ್ಚರಿಸಿದ್ದಾರೆ. ಅಷ್ಟೇ ಅಲ್ಲದೆ ಮತ್ತೊಬ್ಬರನ್ನು ನಿಂದಿಸಬಾರದು ಎಂಬುದನ್ನು ಸಹ ತಿಳಿಸಿದ್ದಾರೆ. ಇಂದಿನ ಆಧುನಿಕ ಜೀವನ ವ್ಯವಸ್ಥೆಯಲ್ಲಿ ಸಂಪತ್ತು ಗಳಿಸುವ ಸ್ವಾರ್ಥ ಸಾಧನೆಯಲ್ಲಿ ಬೇರೆಯವರ ಬಗ್ಗೆ ಇಲ್ಲಸಲ್ಲದ ಮಾತುಗಳನ್ನಾಡಬಾರದು ಎಂಬುದನ್ನು ತಮ್ಮ ಕೀರ್ತನೆಯಲ್ಲಿ ಒತ್ತಿ ಹೇಳಿದ್ದಾರೆ.

**"ಕಡುಚಳಕನು ತಾನೇನುತ ಪರರ ಅವಗಡಿಸದಿರೆಚ್ಚರಿಕೆ.**
**ಬಡಬಗರ ಬಾಯಿ ಬಡಿದು ಪಾಪದ ಹೆಜ್ಜೆ ಇಡಬೇಡ ಎಚ್ಚರಿಕೆ"**

ಮನುಷ್ಯ ತನ್ನ ಬುದ್ಧಿವಂತಿಕೆಯಿಂದ ಬೇರೆಯವರನ್ನು ಆಘಾತಕ್ಕೆ ಒಳಪಡಿಸಬಾರದು, ಭಯಪಡಿಸಬಾರದು. ನಾವು ಹಾಗೇನಾದರೂ ಮಾಡಿದರೆ ಅದರಿಂದ ಬೇರೆಯ ಜನರಿಗೆ ತೊಂದರೆ ಆಗುತ್ತದೆ. ಮತ್ತು ಅದರಿಂದ ಮುಂದೊಂದು ದಿನ ನಮಗೆ ತೊಂದರೆಯಾಗಿ ಪರಿಣಮಿಸುತ್ತದೆ. ಮತ್ತು ಬಡವರನ್ನು, ನಿರ್ಗತಿಕರನ್ನು ಎದುರಿಸಿ ಬೆದರಿಸಿ ತಮಗೆ ಅಧಿಕಾರವಿದೆ ಎಂದು ಕೊಲೆ ಸುಲಿಗೆ ಎಂತಹ

ಕಾರ್ಯಗಳನ್ನು ಮಾಡಬಾರದು. ಇದರಿಂದ ಮುಂದೊಂದು ದಿನ ನಮಗೆ ಖಂಡಿತವಾಗಿಯೂ ತೊಂದರೆ ಉಂಟಾಗುತ್ತದೆ ಎಂದು ಹೇಳುತ್ತಾರೆ ಮತ್ತು ಈ ಮೇಲಿನ ಮಾತುಗಳು ಆಧುನಿಕ ಸಮಾಜಕ್ಕೆ ನೀತಿ ಪಾಠಗಳಾಗಿ ಪರಿಣಮಿಸುತ್ತವೆ.

**"ಕರವ ಮುಗಿದು ಸಜ್ಜನಿಗೆ ಶಿರಭಾಗಿ ಚರಿಸುತಿರೆಚ್ಚರಿಕೆ"**

ಸಿರಿ ಎಂಬ ಸೊಡರು ಅಂದರೆ ದೀಪಕ್ಕೆ ಸಜ್ಜನರ ಅವಮಾನವೇ ಬಿರುಗಾಳಿ ಕೇಳೆಚ್ಚರಿಕೆ ಎಂಬ ಮಾತುಗಳನ್ನು ನಾವು ಇಂದಿಗೂ ಪಾಲಿಸುವ ಅಗತ್ಯವಿದೆ. ಮನುಷ್ಯನಾದವನು ಗುರು ಹಿರಿಯರಿಗೆ, ಸಾಧು ಸಜ್ಜನರಿಗೆ ತಲೆಬಾಗಿ ಗೌರವದಿಂದ ಕೈ ಮುಗಿದು ಬದುಕುತ್ತಾ ಜೀವನ ಸಾಗಿಸಬೇಕು. ಅದಕ್ಕೆ ಬದಲಾಗಿ ಸಿರಿ ಸಂಪತ್ತಿನ ಗರ್ವದಿಂದ ವ್ಯವಹರಿಸಬಾರದು. ಸಿರಿ ಎಂಬ ದೀಪವು ಸಜ್ಜನರ ಅವಮಾನವೆಂಬ ಬಿರುಗಾಳಿಗೆ ಆರಿ ಹೋಗುವುದು. ಆದ್ದರಿಂದ ಸಜ್ಜನರಿಗೆ ಅವಮಾನಿಸದೆ ಗೌರವಿಸುತ್ತಾ ಜೀವನದಲ್ಲಿ ಬದುಕಬೇಕು ಎಂಬುದು ಪುರಂದರದಾಸರ ಎಚ್ಚರಿಕೆ ಮಾತಾಗಿದೆ. ಇಂದಿನ ಆಧುನಿಕ ಕಾಲದಲ್ಲಿ ಜನ ಇದನ್ನು ಪಾಲಿಸಬೇಕಾಗಿರುವುದು ಬಹಳ ಮುಖ್ಯವಾಗಿದೆ.

**"ಲೋಕಪವಾದಕ್ಕೆ ಅಂಜಿ ನಡೆಯುವುದು ವಿವೇಕ ಕೇಳುಚ್ಚರಿಕೆ**
**ನಾಕೇಶ ಏನಾದರೂ ಬಿಡದಪಕೀರ್ತಿ ಪರಾಕು ಕೇಳೆಚ್ಚರಿಕೆ**
**ಕಾಕು ಜನರ ಚಾಡಿ ನೀಕೇಳಿ ಕೋಪೋದ್ರೇಕ ಬೇಡೆಚ್ಚರಿಕೆ**
**ಭೂಕಾಂತ ನಡ-ನುಡಿಗಳು ನಿಷ್ಠೂರವಾದ ವಾಕು ಬೇಡೇಚ್ಚರಿಕೆ"**

ಇಂದಿನ ಆಧುನಿಕ ಪ್ರಪಂಚದಲ್ಲಿ ಮನುಷ್ಯ ತನ್ನ ನೆರಳಿಗೆ ತಾನು ಅಂಜುತ್ತ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ ಮನುಷ್ಯ ಎಷ್ಟೇ ಸತ್ಯವಾಗಿ ನಡೆದುಕೊಂಡರೂ ದುರ್ಜನರಿಂದ ಅವನಿಗೆ ಅಪರಾಧದ ಮಾತುಗಳು, ನಿಂದನೆಗಳು ತಪ್ಪುವುದಿಲ್ಲ. ಹೀಗಿರುವಾಗ ತನಗೆ ಅಧಿಕಾರವಿದೆ ಎಂದು, ಜನರ ಬಲವಿದೆ ಎಂದು ಅದನ್ನು ಬಳಸಿಕೊಳ್ಳುತ್ತಾ ದರ್ಪದಿಂದ ನಡೆದರೆ ಕೇಡು ತಪ್ಪುವುದಿಲ್ಲ. ಹಾಗೆಯೇ, ಕೆಲವೊಮ್ಮೆ ನಮಗೆ ಬರುವ ನಿಂದನೆಗಳು, ಅಪವಾದಗಳು ತಪ್ಪುವುದಿಲ್ಲ. ಹೀಗಿರುವಾಗ ನಮ್ಮ ಜೀವನದಲ್ಲಿ ಬರುವ ನಿಂದನೆಗಳು, ಮತ್ತು ಅಪವಾದಗಳಿಂದ ನಮ್ಮಿಂದಾಗಿರುವ ತಪ್ಪನ್ನು ತಿದ್ದುಕೊಂಡು ಅವುಗಳಿಂದ ಪಾಠ ಕಲಿತು ನಡೆದುಕೊಳ್ಳುವುದು ಉತ್ತಮ ಎಂದು ದಾಸರು ಹೇಳಿದ್ದಾರೆ. ಸ್ವರ್ಗದ ಅಧಿಪತಿಯಾದ ಇಂದ್ರನಿಗೂ ಸಹ ಅಪವಾದ ತಪ್ಪಲಿಲ್ಲ. ಹಾಗಿರುವಾಗ ಸಾಮಾನ್ಯ ಮನುಷ್ಯರಾದ ನಾವು ಎಚ್ಚರಿಕೆಯಿಂದ ಇರಬೇಕು. ಕೆಟ್ಟ ಜನರ, ಚಾಡಿಕೋರರ ಮಾತಿಗೆ ಕಿವಿಗೊಡಬಾರದು. ಬೇರೆಯವರ ಮಾತನ್ನು ನಂಬಿ ನಾವೇನಾದರೂ ಕೋಪೋದ್ರೇಕಕ್ಕೆ ಒಳಗಾಗಿ ಮಾತನಾಡಿದರೆ, ನಮ್ಮ ಮಾತಿನಿಂದ ಸಜ್ಜನರಿಗೆ ಅಪಾರ ನೋವುಂಟು ಮಾಡಿದಂತಾಗುತ್ತದೆ. ಆದ್ದರಿಂದ ಸರಿಯಾಗಿ ತಿಳಿದುಕೊಳ್ಳದೆ ಯಾರ ಚಾಡಿ ಮಾತನ್ನು

ನಂಬಿ ನಾವು ಮಾತನಾಡಬಾರದು ಎಂದು ಪುರಂದರದಾಸರು ಎಚ್ಚರಿಕೆಯ ಮಾತುಗಳನ್ನು ಹೇಳಿದ್ದಾರೆ.

**"ನಳವಂತಾದರೆನಾದರೂ ಎಂಬುದ ನೀ ತಿಳಿದು ನೋಡೇಚ್ಚರಿಕೆ**
**ಅಳಿಯುವುದು ಕಾಯವು ಉಳಿಯುವುದೊಂದೇ ಕೀರ್ತಿ ಇಳೆಯೊಳಗೆಚ್ಚರಿಕೆ**
**ಅಳಲಿಸಿ ಪಾರರನ್ನು ಗಳಿಸಿ ತಂದರ್ಥವು ಉಳಿಯದು ಎಚ್ಚರಿಕೆ**
**ಉಳಿದೆಲ್ಲ ಕಾಲದಿ ಧರ್ಮದ ಹಾದಿಯ ಹಳಿಯದಿರೆಚ್ಚರಿಕೆ"**

ಈ ಮೇಲಿನ ಸಾಲುಗಳು ಇಂದಿನ ಆಧುನಿಕ ಕಾಲದಲ್ಲಿ ಯಾವ ಮನುಷ್ಯ ದರ್ಪದಿಂದ ವರ್ತಿಸುತ್ತಿದ್ದಾನೋ ಅಂತಹವರನ್ನು ಕುರಿತು ಪುರಂದರದಾಸರು ಹೇಳಿದಂತಿವೆ. ಈ ಭೂಮಿಯ ಮೇಲೆ ನಮ್ಮ ಜೀವ, ಜೀವನ ಯಾವುದು ಶಾಶ್ವತವಲ್ಲ. ಆದರೆ ಶಾಶ್ವತವಾಗಿ ಉಳಿಯುವುದು ನಾವು ಮಾಡಿದ ಕಾರ್ಯಗಳು ಮಾತ್ರ, ನಾವು ಗಳಿಸಿದ ಕೀರ್ತಿ ಮಾತ್ರ. ಬೇರೆಯವರಿಗೆ ತೊಂದರೆ ನೀಡಿ ಅವರನ್ನು ವಂಚಿಸಿ ಗಳಿಸಿದ ಯಾವುದೇ ಸಂಪತ್ತು, ಸಿರಿ, ಅಧಿಕಾರವಾಗಲಿ ನಮ್ಮ ಬಳಿ ಶಾಶ್ವತವಾಗಿ ಉಳಿಯುವುದಿಲ್ಲ. ಆದ್ದರಿಂದ ಇನ್ನು ಮುಂದೆ ನಮ್ಮ ಜೀವನದಲ್ಲಿ ಉಳಿದಿರುವ ಅಲ್ಪ ಆಯುಷ್ಯವನ್ನು ಆದರೂ ಧರ್ಮ ಮಾರ್ಗದಲ್ಲಿ ನಡೆಯಬೇಕೆಂದು ಪುರಂದರದಾಸರು ನಮ್ಮ ಕೀರ್ತನೆಯ ಮೂಲಕ ಹೇಳುತ್ತಾರೆ.

**"ನೆರೆ ಛಿದ್ರ ಕುಂಭದ ನೀರಿನಂಥ ಆಯುಷ್ಯ ಸರಿಯುತ್ತಿದೆ ಎಚ್ಚರಿಕೆ**
**ಬರುವ ಹನಿ ವೃದ್ಧಿ ತನ್ನ ಕಾಲವನರಿಯದು ಎಚ್ಚರಿಕೆ, ವರದ ಪುರಂದರ**
**ವಿಠಲನ ಚರಣವ ಮರೆಯದಿರೆ ಎಚ್ಚರಿಕೆ"**

ಪ್ರಸ್ತುತ ಸಮಾಜದಲ್ಲಿ ಸ್ತ್ರೀಯರ ಅಪಹರಣ, ಅತ್ಯಾಚಾರ, ಕೊಲೆ ಅಂತಹ ಹೀನ ಕೃತ್ಯಗಳನ್ನು ಮಾಡುವ ಜನರಿಗೆ ಪುರಂದರದಾಸರ ಈ ಮೇಲಿನ ಮಾತುಗಳು ನೀತಿ ಪಾಠವನ್ನು ಹೇಳುತ್ತವೆ. ಪರ ಸ್ತ್ರೀಯರನ್ನು ಕೆಟ್ಟ ದೃಷ್ಟಿಯಿಂದ ನೋಡಬಾರದು. ಬೇರೆಯವರ ಸಿರಿ ಸಂಪತ್ತು, ಹಣಕ್ಕೆ ಆಸೆಪಡಬಾರದು. ನಾವು ಹಾಗೇನಾದರೂ ಮಾಡಿದರೆ ನಮ್ಮಲ್ಲಿರುವ ಸಿರಿ ಸಂಪತ್ತು ಅಂದರೆ ಸಂಪತ್ತಿನ ಅಧಿದೇವತೆಯಾದ ಲಕ್ಷ್ಮಿಯು ಮುಖ ತಿರುಗಿಸಿಕೊಂಡು ಹೊರಟು ಹೋಗುತ್ತಾಳೆ. ನಾವು ಈ ಜಗತ್ತಿನಲ್ಲಿ ಶಾಶ್ವತವಾಗಿ ಬದುಕಿರುವುದಿಲ್ಲ. ಇದ್ದಷ್ಟು ದಿನ ಇತರರ ವಸ್ತುಗಳಿಗೆ ಆಸೆ ಪಡದೆ ಬದುಕಬೇಕು ಮತ್ತು ನಮ್ಮ ಆಯಸ್ಸು ಯಾವಾಗ ಮುಗಿದು ಹೋಗುವುದೆಂದು ಯಾರಿಗೂ ತಿಳಿದಿಲ್ಲ. ನಮ್ಮ ಆಯಸ್ಸು ತೂತದ ಮಡಿಕೆಯಲ್ಲಿ ನೀರು ಸೋರಿ ಹೋಗುವಂತೆ ಕಳೆದುಹೋಗುತ್ತಿರುತ್ತದೆ. ಹೀಗಿರುವಾಗ ಮನುಷ್ಯನಿಗೆ ಉಂಟಾಗುವ ಲಾಭ ನಷ್ಟಗಳು ಸಹ ಕಾಲದ ಮಿತಿಯನ್ನು ಮೀರಲಾರವು. ಕಾಲಕ್ಕಿಂತ ಹೆಚ್ಚಾದುದ್ದು ಯಾವುದು ಇಲ್ಲ. ನಾವು ಮಾಡಿದ ತಪ್ಪುಗಳನ್ನು ಮನ್ನಿಸಿ, ನಮ್ಮ ಸತ್ಕಾರ್ಯಗಳಿಗೆ, ಸದ್ಭಕ್ತಿಯ ಬೇಡಿಕೆಗೆ ಒಲಿದು ವರವನ್ನು ನೀಡುವ ಮೋಕ್ಷ ದಾರಿಯಾದ ಪುರಂದರ ವಿಠಲರನ್ನು ಆಯುಷ್ಯ ಇರುವವರೆಗೂ ನೆನೆಯುವುದು ಒಳ್ಳೆಯದು ಎಂದು

ಪುರಂದರದಾಸರು ಹೇಳುತ್ತಾರೆ. ಹಲವು ದುಷ್ಕೃತ್ಯಗಳನ್ನು ಮಾಡುತ್ತಾ ಕಾಲಹರಣ ಮಾಡುವ ಬದಲು ಪುರಂದರ ವಿಠಲನ ನಾಮಸ್ಮರಣೆ ಮಾಡುತ್ತಾ ಕಾಲ ಕಳೆಯಬಹುದು ಎಂದು ಪುರಂದರದಾಸರು ಹೇಳುತ್ತಾರೆ.

**"ಹೊಲೆಯ ವರೆಗಿಹನೆ ಊರೊಳಗಿಲ್ಲವೇ ಹೊಲಗೇರಿಯೊಳು ಹೊಲತಿಲ್ಲವೇ**
**ಶೀಲವನ್ನು ಕೈಗೊಂಡು ನಡೆಸದವನೇ ಹೊಲೆಯ.**
**ಹೇಳಿದ ಹರಿಶಾಸ್ತ್ರವ ಕೇಳದವನೇ ಹೊಲೆಯ**
**ಇದ್ದಾಗ ದಾನ ಧರ್ಮವ ಮಾಡದವನೇ ಹೊಲೆಯ**
**ಕೊಂಡ ಋಣವನ್ನು ತಿರುಗಿಕೊಡದಿರುವವನೇ ಹೊಲೆಯ**
**ಲೇಸು ಉಪಕಾರವ ಅರಿಯದಿದ್ದವನೇ ಹೊಲೆಯ."**

ಎಂಬ ಸಾಲುಗಳಲ್ಲಿ ಪುರಂದರದಾಸರು ಇಂದಿನ ಸಮಾಜದಲ್ಲಿ ದಲಿತರು, ಹಿಂದುಳಿದವರ ಬಗ್ಗೆ ಜನ ತೋರುತ್ತಿರುವ ನಿರ್ಲಕ್ಷ ಭಾವನೆಗೆ ತಕ್ಕ ಉತ್ತರ ನೀಡಿದಂತಿವೆ. ಮನುಷ್ಯ ಜಾತಿಯಿಂದ ಹೊಲೆಯನಲ್ಲ, ಅವನ ಕಾರ್ಯಗಳಿಂದ, ನಡವಳಿಕೆಯಿಂದ ಅವನು ಹೊಲೆಯನಾಗುತ್ತಾನೆ ಎಂದು ತಿಳಿಸಿದ್ದಾರೆ.

"ಜಾಲಿಯ ಮರದಂತೆ ದೊರೆಯೊಳು ದುರ್ಜನರು ಮೂಲಗ್ರಹ ಪರಿಯಂತ ಮುಳ್ಳು ಕೂಡಿಪ್ಪಂತೆ

**ಬಿಸಿಲಲ್ಲಿ ಬಾಳಲಿ ಬಂದವರಿಗೆ ನೆರಳಿಲ್ಲ**
**ಹಸಿದು ಬಂದವರಿಗೆ ಹಣ್ಣು ಇಲ್ಲ**
**ಕುಸುಮ ವಾಸನೆ ಇಲ್ಲ ಕೂಡಲು ಸ್ಥಳವಿಲ್ಲ**
**ರಸದಲ್ಲಿ ಸ್ವಾಧವೂ ವಿಷದಂತೆ ಇರುತಿಹ**
**ಊರ ಹಂದಿಗೆ ಷಡ್ರಸಾನ್ನವನಿಕ್ಕಲು**
**ನಾರುವ ದುರ್ಗಂಧವ ಬಿಡಬಲ್ಲುದೆ**
**ಕ್ರೂರ ಕರ್ಮವನ್ನು ಬಿಟ್ಟು ಸೃಜನನಾಗುವನೇ"**

ಎಂಬ ಪದ್ಯ ಭಾಗವು ಆಧುನಿಕ ಸಮಾಜದಲ್ಲಿ ನಾವು ಹಲವು ರೀತಿಯ ದುರ್ಜನರನ್ನು ನೋಡುತ್ತೇವೆ. ಅವರು ಎಂದಿಗೂ ಕೂಡ ಸಮಾಜಕ್ಕೆ ಹಿತವನ್ನುಂಟು ಮಾಡುವುದಿಲ್ಲ ಎಂಬುದನ್ನು ತಿಳಿಸುವುದರ ಜೊತೆಗೆ, ಪುರಂದರದಾಸರ ಈ ಮಾತುಗಳು ಪ್ರಪಂಚದಲ್ಲಿ ಸಜ್ಜನರಂತೆ ನಟಿಸಿಕೊಂಡು ದುಷ್ಕೃತ್ಯಗಳನ್ನು ಎಸಗುವವರು ಇದ್ದಾರೆ. ಅವರಿಂದ ನಮಗಾಗಲಿ ಸಮಾಜಕ್ಕಾಗಲಿ ಯಾವುದೇ ಪ್ರಯೋಜನವಾಗಲಾರದು. ಅವರಿಂದ ಎಂದಿಗೂ ಯಾರಿಗೂ ಸಹಾಯವಾಗಲಿ, ಸಹಕಾರವಾಗಲಿ ದೊರೆಯುವುದಿಲ್ಲ. ಜಾಲಿಯ ಮರ ಹೇಗೆ ಮುಳ್ಳಿನಿಂದ ತುಂಬಿರುತ್ತದೆಯೋ ಹಾಗೆ ಅವರಲ್ಲಿ ದುರ್ಗುಣಗಳೇ ತುಂಬಿರುತ್ತವೆ. ಜಾಲಿಯ ಮರ ಹೇಗೆ ನೆರಳನ್ನಾಗಲಿ, ಹೂವನ್ನಾಗಲಿ, ಹಣ್ಣನ್ನಾಗಲಿ ನೀಡುವುದಿಲ್ಲವೋ, ಹಾಗೆಯೇ ದುರ್ಜನರೂ ಕೂಡ ಸಮಾಜದ ಒಳಿತಿಗಾಗಿ ಶ್ರಮಿಸುವುದಿಲ್ಲ. ಬದಲಿಗೆ

ಕಂಟಕಕಾರವಾಗಿಯೇ ಇರುತ್ತಾರೆ. ಅವರಿಂದ ಯಾವ ಒಳ್ಳೆಯ ಕಾರ್ಯ ಅಪೇಕ್ಷೆಯೂ ಇಲ್ಲದೆ, ಜಾಲಿ ಮರದಿಂದ ದೂರವಿರುವಂತೆ ನಾವು ದುರ್ಜನರಿಂದ ದೂರವಿರುವುದೇ ಲೇಸು ಎಂದು ಹೇಳುತ್ತಾರೆ.

ಹಾಗೆ, "ಊರ ಹಂದಿಗೆ ಷಡ್ರಸಾನ್ನವನಿಕ್ಕಿದರೂ ನಾರುವ ದುರ್ಗಂಧ ಬಿಡುವುದೆ" ಎಂಬ ಸಾಲುಗಳಲ್ಲಿ ಯಾವ ಮನುಷ್ಯನಲ್ಲಿ ದುರ್ಗುಣಗಳು ತುಂಬಿರುತ್ತವೆಯೋ ಅಂತಹವನಿಗೆ ಎಷ್ಟು ಒಳ್ಳೆಯ ನುಡಿ ಮಾರ್ಗದರ್ಶಕಗಳನ್ನು ನೀಡಿದರೂ ಅದನ್ನು ತಿಳಿದುಕೊಳ್ಳದೆ ತಮ್ಮ ದುರ್ಗುಣಗಳ ಜೊತೆಗೆ ಬದುಕಲು ಪ್ರಯತ್ನಿಸುತ್ತಾರೆ. ಹಂದಿ ತನ್ನ ವಾಸನೆಯನ್ನು ಹೇಗೆ ಬಿಡುವುದಿಲ್ಲ ಹಾಗೆ, ತನ್ನ ದುರ್ಗುಣಗಳನ್ನು ಬಿಡುವುದಿಲ್ಲ ಎಂದು ಕೀರ್ತನೆಯಲ್ಲಿ ಹೇಳುತ್ತಾರೆ. ಪುರಂದರದಾಸರ ಈ ಮಾತುಗಳು ದುರ್ಜನರಿಂದ ದೂರವಿರಬೇಕು, ಅವರನ್ನು ಒಳ್ಳೆಯವರನ್ನಾಗಿ ಪರಿವರ್ತಿಸಲು ನಾವು ಎಷ್ಟೇ ಪ್ರಯತ್ನಿಸಿದರೂ ವ್ಯರ್ಥ ಎಂದು ತಿಳಿಸುತ್ತವೆ.

**"ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಿಕೊಳ್ಳಲು ಬೇಡಿ ಹುಚ್ಚಪ್ಪಗಳಿರಾ**
**ಕಣ್ಣು ಕೈ ಕಾಲು ಕಿವಿ ನಾಲಿಗೆ ಇರಲಿಕ್ಕೆ ಮಣ್ಣು ಮುಕ್ಕಿ ಮರುಳಾಗುವರೆ?**
**ಹೆಣ್ಣು ಮಣ್ಣಿಗಾಗಿ ಹರಿಹರ ಅಮೃತ ಉಣ್ಣದೆ ಉಪವಾಸ ಮಾಡುವರೆ?"**

ಎಂಬ ಪುರಂದರದಾಸರ ಮಾತುಗಳು ಹಿಂದಿನ ಜನರ ಸಮಸ್ಯೆಯನ್ನು ಕುರಿತು ನೀತಿ ಹೇಳುತ್ತಿರುವಂತಿವೆ. "ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಿಕೊಳ್ಳಲು ಬೇಡಿ ಹುಚ್ಚಪ್ಪಗಳಿರಾ" ಎಂದು ರೈತರ ಆತ್ಮಹತ್ಯೆ ಪ್ರಕರಣಗಳನ್ನು, ಆತ್ಮಹತ್ಯೆ ಮಾಡಿಕೊಳ್ಳುವ ಹೇಡಿಗಳನ್ನು ಕುರಿತು ಹೇಳಿದಂತಿದೆ. "ಕಣ್ಣು ಕೈ ಕಾಲು ಕಿವಿ ನಾಲಿಗೆ ಇರಲಿಕೆ ಮಣ್ಣು ಮುಕ್ಕಿ ಮರುಳಾಗುವರೆ" ಎಂದರೆ, ನಮಗೆ ದುಡಿದು ಬದುಕಲು, ಸತ್ಯ ಹೇಳಲು ಕೈ ಕಾಲುಗಳು, ನಾಲಿಗೆಗಳಿವೆ. ಅದನ್ನು ಬೇರೆ ಕೃತ್ಯಗಳಿಗೆ ಬಳಸಬಾರದು. ಸತ್ಯ ತಿಳಿಯದೆ ನಾವು ಮೋಸ ವಂಚನೆಗಳಿಗೆ ಒಳಗಾಗಿ ಮಣ್ಣು ಮುಕ್ಕಬಾರದು ಎಂಬ ಲೋಕ ನೀತಿಯನ್ನು ಪುರಂದರದಾಸರು ಹೇಳಿದ್ದಾರೆ.

ಪುರಂದರದಾಸರು ಹೇಳುವಂತೆ ಮಾನವನು ತನ್ನ ಜೀವನವನ್ನು ನಾಶ ಮಾಡಿಕೊಳ್ಳಬಾರದು ಮತ್ತು ಅಧಿಕಾರವಿದೆ ಎಂದು ಮತ್ತೊಬ್ಬರ ಜೊತೆಗೆ ದರ್ಪದಿಂದ ವರ್ತಿಸಬಾರದು. ಒಂದು ವೇಳೆ ಹಾಗೇನಾದರೂ ವರ್ತಿಸಿದರೆ ನಮ್ಮ ದರ್ಪದ ನಡವಳಿಕೆಯೇ ನಮಗೆ ತೊಂದರೆಯಾಗಿ ಪರಿಣಮಿಸುತ್ತದೆ. ಆದ್ದರಿಂದ ಮಾನವ ಬದುಕಿರುವಷ್ಟು ದಿನ ದರ್ಪದಿಂದ ವರ್ತಿಸದೆ ಎಲ್ಲರೊಂದಿಗೆ ಸಾಮಾನ್ಯರಂತೆ ಬದುಕಿದರೆ ಜೀವನ ಸಾರ್ಥಕ ಎಂಬುದು ಪುರಂದರದಾಸರ ಮಾತುಗಳಿಂದ ತಿಳಿದುಬರುತ್ತದೆ.

## ಪರಾಮರ್ಶನ ಗ್ರಂಥಗಳು:

1. ಶ್ರೀನಿವಾಸ ಹಾವನೂರ & ಸತ್ಯನಾರಾಯಣ ರಾವ್ ಹೊ.ರಾ., (2002), ಪುರಂದರದಾಸರ ಜನಪ್ರಿಯ ಕೀರ್ತನೆಗಳು, ಅಂಕಿತ ಪುಸ್ತಕ, ಬೆಂಗಳೂರು.
2. ಅರಳು ಮಲ್ಲಿಗೆ ಪಾರ್ಥಸಾರಥಿ (ಸಂ), (2016), ಪುರಂದರದಾಸರ ಸಾವಿರಾರು ಹಾಡುಗಳು, ಓಂಕಾರ್ ಪ್ರಕಾಶನ, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.